**O. S. No:118/2020**
**DW:2**

(ಇಂದು ದಿನಾಂಕಃ **18-02-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿ ಪರವಾಗಿ ಶ್ರೀ ಆರ್ ಎಂ ಆರ್ ವಕೀಲರಿಂದಃ**

1 ನೇ ಪ್ರತಿವಾದಿಯ ತವರು ಮನೆ ಶಿಶ್ವಿನಹಳ್ಳಿ ಗ್ರಾಮ ಎಂದರೆ ಸರಿ. ನನ್ನ ಗಂಡನ ಊರು ಕಿರೇಸೂರ ಗ್ರಾಮ ಎಂದರೆ ಸರಿ. ನನ್ನ ತವರು ಮನೆ ಬಸಾಪೂರ ಗ್ರಾಮ ಎಂದರೆ ಸರಿ. ಕಿರೇಸೂರ ಗ್ರಾಮದಿಂದ ಶಿಶ್ವಿನಹಳ್ಳಿ ಗ್ರಾಮ 5-6 ಕಿ. ಮೀ. ಅಂತರದಲ್ಲಿದೆ. ಕಿರೇಸೂರ ಗ್ರಾಮದಿಂದ ಬಸಾಪೂರ ಗ್ರಾಮ 30 ಕಿ. ಮೀ. ಅಂತರದಲ್ಲಿದೆ. ಶಿಶ್ವಿನಹಳ್ಳಿ ಗ್ರಾಮದಿಂದ ಬಸಾಪೂರ ಗ್ರಾಮ ಎಷ್ಟು ಕಿ. ಮೀ. ಅಂತರದಲ್ಲಿದೆ ಎಂದು ನನಗೆ ಗೊತ್ತಿಲ್ಲ.

2. ದಾವೆಯಲ್ಲಿ ನಾನು ಹಾಜರಾಗುವುದಕ್ಕಿಂತ ಮುಂಚೆ ವಾದಿ 1 ನೇ ಪ್ರತಿವಾದಿಯ ವಿರುದ್ಧ 7 ಎಕರೆ 32 ಗುಂಟೆ ಜಮೀನಿಗೆ ಸಂಬಂಧಿಸಿ ಮಾತ್ರ ಸಲ್ಲಿಸಿದ್ದರು. ಸದರಿ ಜಮೀನು ನನ್ನ ತಂದೆಯ ಕುಟುಂಬಕ್ಕೆ ಸೇರಿದ್ದು ಅಲ್ಲ ಎಂದರೆ ಸರಿ. ಜಮೀನು ಸರ್ವೇ ನಂಃ 318 ವಾದಿಯ ತಾಯಿ ಯಲ್ಲವ್ವ ಶಿವಬಸಪ್ಪ ಜಡಿರವರಿಗೆ ಸಂಬಂಧಿಸಿದ್ದು ಎಂದರೆ ಸರಿ. ಸದರಿ ಜಮೀನು ಮೊದಲಿಗೆ ಮುದಕಪ್ಪ ಪರಪ್ಪ ಕಂತಿಯವರಿಗೆ ಸಂಬಂಧಿಸಿದ್ದು ಎಂದರೆ ಸರಿ. ಸದರಿ ಮುದಕಪ್ಪನವರು ಸದರಿ ಜಮೀನನ್ನು ಯಲ್ಲವ್ವ ರವರಿಗೆ 1965 ರಲ್ಲಿ ಭಕೀಸ ಮುಖಾಂತರ ನೀಡಿರುತ್ತಾರೆ ಎಂದರೆ ಸರಿ. ಸದರಿ ಜಮೀನನ್ನು ಯಲ್ಲವ್ವರವರು 1 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಗೊತ್ತಿಲ್ಲದ ಹಾಗೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಜನ್ಮ ದಿನಾಂಕಃ 05-05-1986. 1 ನೇ ಪ್ರತಿವಾದಿಯ ಗಂಡ ನನ್ನ ಅಣ್ಣ. ನಿಂಗಪ್ಪ ಮೃತಪಟ್ಟ ನಂತರ ವಾರಸನಾತೆಯಿಂದ ಸದರಿ ಜಮೀನು 1 ರಿಂದ 4 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

3. ದಾವಾ ಜಮೀನು ಸರ್ವೇ ನಂಃ 899/2 ಪೈಕಿ ಕ್ಷೇತ್ರ 03 ಎಕರೆ 04 ಗುಂಟೆ ಹಾಗೂ ಸರ್ವೇ ನಂಃ 898/4 ಕ್ಷೇತ್ರ 04 ಎಕರೆ ಜಮೀನುಗಳು ನನ್ನ ತಂದೆಯ ಕುಟುಂಬಕ್ಕೆ ಸಂಬಂಧಿಸಿದ್ದವು ಎಂದರೆ ಸರಿ. ನನ್ನ ತಂದೆಗೆ ಒಟ್ಟು 2 ಜನ ಸಹೋದರರು. ಸದರಿಯವರೆಂದರೆ ನನ್ನ ತಂದೆ, ಹನಮಂತಪ್ಪ ಹಾಗೂ ಜಗದೀಶ ಚವಡಿ. ಸದರಿಯವರ ಪೈಕಿ ಜಗದೀಶ ಚವಡಿಯವರು ದತ್ತಕಕ್ಕೆ ಹೋಗಿರುತ್ತಾರೆ ಎಂದರೆ ಸರಿ. ನನ್ನ ತಂದೆ ಹಾಗೂ ಹನಮಂತಪ್ಪರವರು ದಿನಾಂಕಃ 20-12-2017 ರಂದು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಪಾಲು ವಿಭಾಗದಲ್ಲಿ ದಾವಾ ಜಮೀನು ಸರ್ವೇ ನಂಃ 899/2 ಪೈಕಿ ದಕ್ಷಿಣ ಭಾಗದ ಕ್ಷೇತ್ರ 03

ಎಕರೆ 04 ಗುಂಟೆ ಹಾಗೂ ಸರ್ವೇ ನಂಃ 898/4 ಕ್ಷೇತ್ರ 04 ಎಕರೆ ಜಮೀನುಗಳು ನನ್ನ ತಂದೆಯ ಪಾಲಿಗೆ ಬಂದಿರುತ್ತವೆ ಎಂದರೆ ಸರಿ. ಅದೇ ರೀತಿ ದಾವಾ ಜಮೀನು ಸರ್ವೇ ನಂಃ 899/2 ಪೈಕಿ ಉತ್ತರ ಭಾಗದ ಕ್ಷೇತ್ರ 03 ಎಕರೆ 04 ಗುಂಟೆ ಹಾಗೂ ಸರ್ವೇ ನಂಃ 904/3 ಕ್ಷೇತ್ರ 04 ಎಕರೆ 11 ಗುಂಟೆ ಜಮೀನುಗಳು ನನ್ನ ದೊಡ್ಡಪ್ಪ ಹನಮಂತಪ್ಪ ರವರ ಪಾಲಿಗೆ ಬಂದಿರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳಿಲ್ಲ ಎಂದರೆ ಸರಿ.

4. ನನ್ನ ಅಣ್ಣ ನಿಂಗಪ್ಪರವರು ಒಕ್ಕಲುತನ ಮಾಡುತ್ತಿದ್ದರು ಎಂದರೆ ಸರಿ. ಸದರಿ ನಿಂಗಪ್ಪ ಬ್ಯಾಂಕಿನಲ್ಲಿ ಹಾಗೂ ಬೇರೆಯವರ ಬಳಿ ಸಾಲ ಮಾಡಿದ್ದರು ಎಂದರೆ ಸರಿ. ಸದರಿ ಸಾಲಗಾರರು ನಿಂಗಪ್ಪರವರಿಗೆ ಸಾಲ ಮರುಪಾವತಿಸುವಂತೆ ಕಿರಿಕಿರಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಬ್ಯಾಂಕ್ ನವರೂ ಸಹ ನಿಂಗಪ್ಪರವರಿಗೆ ನೋಟಿಸ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಮೃತಪಡುವುದಕ್ಕಿಂತ ಮುಂಚೆ ತನ್ನ ತಂದೆ, ತಾಯಿ ಹಾಗೂ ಹೆಂಡತಿಯೊಂದಿಗೆ ವಾಸವಿದ್ದರು ಎಂದರೆ ಸಾಕ್ಷಿಯು ಆತನ ಹೆಂಡತಿ 1 ತಿಂಗಳ ಮುಂಚೆ ಮನೆ ಬಿಟ್ಟು ಹೋಗಿದ್ದರು ಎಂದು ನುಡಿದಿರುತ್ತಾರೆ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರು ಮೃತಪಡುವ ವೇಳೆ ನನ್ನ ತಂದೆಗೆ 80 ವರ್ಷ ಹಾಗೂ ತಾಯಿಗೆ 60 ವರ್ಷ ವಯಸ್ಸಾಗಿತ್ತು. ನಿಂಗಪ್ಪ ಸಾಲ ಮಾಡಿದ್ದ ವ್ಯಕ್ತಿಗಳು ಹಾಗೂ ಬ್ಯಾಂಕಿನವರು ಸಾಲ ಮರುಪಾವತಿ ಮಾಡುವಂತೆ ಒತ್ತಾಯ ಮಾಡುವ ವೇಳೆ ನಮ್ಮ ಊರಿನಲ್ಲಿ ಬರಗಾಲವಿತ್ತು ಎಂದರೆ ಸರಿಯಲ್ಲ. ಸದರಿಯವರ ಕಿರುಕುಳ ತಾಳಲಾರದೆ ನನ್ನ ಸಹೋದರ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ ಎಂದರೆ ಸಾಕ್ಷಿಯು ನನ್ನ ಸಹೋದರ ಆತ್ಮಹತ್ಯೆ ಮಾಡಿಕೊಂಡಿದ್ದು ಆದರೆ ಅದಕ್ಕೆ ಕಾರಣ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿಯವನು ಮೃತಪಟ್ಟ ನಂತರ ಅಣ್ಣಿಗೇರಿ ಪೋಲೀಸ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ವಿಷಯ ದಿನಪತ್ರಿಕೆಯಲ್ಲಿ ಪ್ರಕಟವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವನ ಆತ್ಮಹತ್ಯೆ ಮಾಡಿಕೊಂಡಿದ್ದರಿಂದ ಸರ್ಕಾರದಿಂದ ರೂ. 5,00,000/- ಗಳನ್ನು ಪರಿಹಾರದ ರೂಪದಲ್ಲಿ 1 ನೇ ಪ್ರತಿವಾದಿಗೆ ನೀಡಿದ್ದರು ಎಂದರೆ ಸರಿ.

5. ನನ್ನ ಸಹೋದರ ನಿಂಗಪ್ಪ ಮೃತಪಟ್ಟ 2 ವರ್ಷಗಳ ನಂತರ ನನ್ನ ತಂದೆ ಮೃತಪಟ್ಟಿರುತ್ತಾರೆ. ನನ್ನ ತಂದೆ ದಿನಾಂಕಃ 17-07-2019 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿಯವರು ಮೃತಪಡುವುದಕ್ಕಿಂತ ಮುಂಚೆ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದರು. ಸದರಿಯವರನ್ನು ನವನಗರದ ಆಸ್ಪತ್ರೆಯಲ್ಲಿ, ಗದಗನ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಲಾಸಗಿರುತ್ತದೆ. ಸದರಿಯವರಿಗೆ 2 ಬಾರಿ ಶಸ್ತ್ರ ಚಿಕಿತ್ಸೆ ಮಾಡಲಾಗಿರುತ್ತದೆ. ಸದರಿ ಶಸ್ತ್ರ ಚಿಕಿತ್ಸೆಗಳು ಎಷ್ಟು ಅವಧಿಯ ಅಂತರದಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿಯವರು ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವ ಪೂರ್ವದಲ್ಲಿ 1 ರಿಂದ 4 ನೇ ಪ್ರತಿವಾದಿಯರು ಹಾಗೂ ವಾದಿ ಅವರ ಜೊತೆ

ಇದ್ದರು ಎಂದರೆ ವಾದಿ ಮಾತ್ರ ಇದ್ದರು ಎಂದು ನುಡಿದಿರುತ್ತಾರೆ. ಸದರಿಯವರ ಚಿಕಿತ್ಸೆಗಾಗಿ ಅಂದಾಜು ರೂ. 5 ರಿಂದ 6 ಲಕ್ಷ ವೆಚ್ಚವಾಗಿರುತ್ತದೆ ಎಂದರೆ ಸರಿ. ಸದರಿ ವೆಚ್ಚವನ್ನು 1 ನೇ ಪ್ರತಿವಾದಿ ತನಗೆ ಪರಿಹಾರವಾಗಿ ಬಂದಿದ್ದ ಹಣ ಹಾಗೂ ತನ್ನ ತವರು ಮನೆಯಿಂದ ಹಣ ತಂದು ಭರಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ವಯಸ್ಸಾದ ಕಾರಣ ಸದರಿಯವರಿಗೆ ಕೆಲಸ ಮಾಡಲು ಆಗುತ್ತಿರಲಿಲ್ಲ ಎಂದರೆ ಸರಿ.

6. ಜಮೀನು ಸರ್ವೆ ನಂಃ 898/4 ಕ್ಷೇತ್ರ 4 ಎಕರೆ ಜಮೀನು ನನ್ನ ತಂದೆ ಮೃತಪಡುವ ವೇಳೆ ಅವರ ಹೆಸರಿನಲ್ಲಿತ್ತು ಎಂದರೆ ಸರಿ. ನನ್ನ ತಂದೆ ಜೀವಂತವಿದ್ದಾಗ ತನ್ನ ಪಾಲಿಗೆ ಬಂದಿದ್ದ ಆಸ್ತಿಗಳಲ್ಲಿ ನಮ್ಮ ನಡುವೆ ಯಾವುದೇ ರೀತಿಯ ಪಾಲು ವಿಭಾಗವಾಗಿರಲಿಲ್ಲ ಎಂದರೆ ಸರಿ. ಸದರಿ ಜಮೀನು ನನ್ನ ತಂದೆಗೆ ಆತನ ಹಿರಿಯರಿಂದ ಬಂದ ಜಮೀನಾಗಿತ್ತು ಎಂದರೆ ಸರಿ. ನನ್ನ ತಂದೆ ವಾದಿಯ ಹೆಸರಿನಲ್ಲಿ ಭಕ್ಷೀಸ ಪತ್ರ ಮಾಡುವ ವೇಳೆ ನನ್ನನ್ನು ಕರೆಸಿರುವುದಿಲ್ಲ. ಸದರಿ ಭಕ್ಷೀಸ ಪತ್ರ ಮಾಡುವ ಕುರಿತು ನನ್ನ ತಂದೆ ನನಗೆ ತಿಳಿಸಿರುವುದಿಲ್ಲ. ಸದರಿ ಭಕ್ಷೀಸ ಪತ್ರ ಮಾಡುವ ವೇಳೆ ನಾನು ಹಾಜರಿರಲಿಲ್ಲ. ಸದರಿ ಭಕ್ಷೀಸ ಪತ್ರಕ್ಕೆ 1 ರಿಂದ 4 ನೇ ಪ್ರತಿವಾದಿಯರು ಸಹಿ ಮಾಡಿರುವುದಿಲ್ಲ. ನನ್ನ ತಂದೆ ಬಸಾಪೂರದಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಮೃತಪಡುವ 1 ವರ್ಷದ ಮೊದಲು ಸದರಿ ಭಕ್ಷೀಸ ಪತ್ರ ಮಾಡಿರುತ್ತಾರೆ. ವಾದಿ ಖೊಟ್ಟಿಯಾಗಿ ಭಕ್ಷೀಸ ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ 1 ರಿಂದ 4 ನೇ ಪ್ರತಿವಾದಿಯರಿಗೆ ಸಹ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

7. ದಾವಾ ಆಸ್ತಿ ಸರ್ವೆ ನಂಃ 899/2 ಕ್ಷೇತ್ರ ದಕ್ಷಿಣ ಭಾಗದ 3 ಎಕರೆ 4 ಗುಂಟೆ ಜಮೀನು ಈಗ ನನ್ನ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಜಮೀನಿನಲ್ಲಿ 1 ರಿಂದ 4 ಪ್ರತಿವಾದಿಯರಿಗೆ ಹಿಸ್ಸೆ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೂ ಸಹ ಹಿಸ್ಸೆ ಇರುತ್ತದೆ ಎಂದು ನುಡಿದಿರುತ್ತಾರೆ.

8. 5 ನೇ ಪ್ರತಿವಾದಿ ನನ್ನ ಅಕ್ಕ. ನನ್ನ, ವಾದಿ ಹಾಗೂ 5 ನೇ ಪ್ರತಿವಾದಿಯ ನಡುವೆ ಉತ್ತಮ ಬಾಂಧವ್ಯವಿದೆ ಎಂದರೆ ಸರಿ. 1 ನೇ ಪ್ರತಿವಾದಿ ತಾವು ಕೆಲಸ ಮಾಡಿ ಬಂದ ಹಣವನ್ನು ನನ್ನ ಸಹೋದರ ನಿಂಗಪ್ಪರವರಿಗೆ ನೀಡುತ್ತಿದ್ದರು ಎಂದರೆ ಸರಿ. ನನ್ನ ಮದುವೆಯ ನಂತರ ನನ್ನ ಸಹೋದರ ನಿಂಗಪ್ಪನವರು ಮನೆತನದ ಹಿರಿತನ ಮಾಡುತ್ತಿದ್ದರು ಎಂದರೆ ಸರಿ. ನನ್ನ ಹಾಗೂ 5 ನೇ ಪ್ರತಿವಾದಿಯ ಮದುವೆಯನ್ನು ನನ್ನ ತಂದೆ, ತಾಯಿ ಹಾಗೂ ಸಹೋದರ ನೆರವೇರಿಸಿರುತ್ತಾರೆ ಎಂದರೆ ಸರಿ.

9. ಜಮೀನು ಸರ್ವೆ ನಂಃ 318 ಕ್ಷೇತ್ರ 7 ಎಕರೆ 32 ಗುಂಟೆ ಜಮೀನಿನಲ್ಲಿ ನನಗಾಗಲೀ, ವಾದಿಗಾಗಲೀ ಹಾಗೂ 5 ನೇ ಪ್ರತಿವಾದಿಗಾಗಲೀ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ.

ವಾದಿಯರ ಮಾತು ಕೇಳಿ 1 ರಿಂದ 4 ನೇ ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**